ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಎಂ. ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 728

ಉತ್ತರಿಸಬೇಕಾದ ದಿನಾಂಕ : 25.09.2020.

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ, ಹಜ್ ಹಾಗೂ ವಕ್ಫ್ ಸಚಿವರು.

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ	ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿರುವ ರಾಯಸಂದ್ರ ಕಾವಲು ಅಮೃತ್‌ಮಹಲ್‌ಗೆ ಸೇರಿದ ಒಟ್ಟು ಜಾಗವೆಷ್ಟು; (ವಿವರ ನೀಡುವುದು) ಸದರಿ ಜಮೀನಿನಲ್ಲಿ ಎಷ್ಟು ಎಕರೆ ಒತ್ತುವರಿಯಾಗಿದೆ: ಎಷ್ಟು ಜಮೀನನ್ನು ಮೈಸೂರು ಮಿನರಲ್ಸ್ ಸಂಸ್ಥೆಗೆ ನೀಡಲಾಗಿದೆ;	ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿರುವ ರಾಯಸಂದ್ರ ಕಾವಲು ಅಮೃತ್‌ಮಹಲ್‌ಗೆ ಸೇರಿದ ಒಟ್ಟು ಜಾಗ–1406.34 ಎಕರೆಗಳು. ಸದರಿ ಜಮೀನಿನಲ್ಲಿ ಒಟ್ಟು:24.32 ಎಕರೆ ಒತ್ತುವರಿಯಾಗಿದೆ. ಮೈಸೂರು ಮಿನರಲ್ಸ್ ಸಂಸ್ಥೆಗೆ 740 ಎಕರೆ ಜಮೀನನ್ನು ನೀಡಲಾಗಿದೆ. ಮೆ:ಮೈಸೂರು ಮಿನರಲ್ಸ್ ಸಂಸ್ಥೆ, ಬೆಂಗಳೂರು ರವರು 740ಎಕರೆ ಜಮೀನಿನಲ್ಲಿ 500 ಎಕರೆಯನ್ನು ಉಳಿಸಿಕೊಂಡು 240ಎಕರೆ ಜಮೀನನ್ನು ದಿನಾಂಕ:01–07–2010 ರಂದು ಇಲಾಖೆಗೆ ಹಸ್ತಾಂತರಿಸಿರುತ್ತಾರೆ.
ಆ	ಸದರಿ ಜಮೀನನ್ನು ಮೈಸೂರು ಮಿನರಲ್ಸ್ ಸಂಸ್ಥೆಗೆ ಯಾವಾಗ, ಯಾವ ಮಾರ್ಗ ಸೂಚಿಗಳನ್ವಯ ಮತ್ತು ಎಷ್ಟು ವರ್ಷಗಳಿಗೆ ನೀಡಲಾಗಿದೆ. (ಸರ್ಕಾರದ ಆದೇಶಗಳನ್ನು ನೀಡುವುದು)	ಮೈಸೂರು ಮಿನರಲ್ಸ್ ಸಂಸ್ಥೆಗೆ ಸದರಿ ಜಮೀನನ್ನು (1) ಸರ್ಕಾರದ ಆದೇಶದ ಸಂಖ್ಯೆ:ಎ.ಎಹೆಚ್.ಎಫ್.ಎಫ್:ಎಎಲ್ ಎನ್:87: ಬೆಂಗಳೂರು, ದಿನಾಂಕ:28–9–1988 ರಂತೆ ದಿ:1–11–1976 ರಿಂದ 31–10–1996 ರವರೆಗೆ 20 ವರ್ಷಗಳಿಗೆ ನೀಡಲಾಗಿತ್ತು. (ಪ್ರತಿ ಲಗತ್ತಿಸಿದೆ) (2) ಸರ್ಕಾರದ ಪತ್ರದ ಸಂಖ್ಯೆ:ಪಸಂಮೀ:4: ಅಮಭೂ; 2004, ದಿನಾಂಕ:15.4.2011 ರಲ್ಲಿ 2001 ರಿಂದ 2010ರವರೆಗೆ ಗುತ್ತಿಗೆ ಅವಧಿ ನಿಗದಿಪಡಿಸಲಾಗಿತ್ತು. (ಪ್ರತಿ ಲಗತ್ತಿಸಿದೆ)
ಇ	ಸದರಿ ಜಮೀನನ್ನು ಮೈಸೂರು ಮಿನರಲ್ಸ್	ಮೈಸೂರು ಮಿನರಲ್ಸ್ ಸಂಸ್ಥೆಗೆ ಸದರಿ ಜಮೀನನ್ನು

		ಉಾ. ಮೇಲೆ ಕಾಣಿಸಿದ ಯಾವುದೇ ಷರತ್ತುಗಳಲ್ಲಿ 'ಅ' ಇಂದ 'ಊ' ರವರೆಗೆ ಉಲ್ಲಂಘನೆಯಾದ ಪಕ್ಷದಲ್ಲಿ ಗುತ್ತಿಗೆ ಜಮೀನನ್ನು ಹಿಂದಕ್ಕೆ ತೆಗೆದುಕೊಳ್ಳಲು ಸರ್ಕಾರಕ್ಕೆ ಅಧಿಕಾರವಿದೆ.
ಈ	ಸದರಿ ಜಮೀನಿನಲ್ಲಿ ಗಣಿಗಾರಿಕೆ ನಡೆಯುತ್ತಿರುವುದರಿಂದ ರಾಯಸಂದ್ರ ಕಾವಲಿನಲ್ಲಿ ತಳಿ ಸಂವರ್ಧನೆ ಕಾರ್ಯಗಳನ್ನು ಕೈಗೊಳ್ಳಲು ಮತ್ತು ರಾಸುಗಳ ಬೆಳವಣಿಗೆಗೆ ಮತ್ತು ಇತರೆ ಪೂರಕ ಚಟುವಟಿಕೆಗಳಿಗೆ ತೊಂದರೆಗಳಾಗಿವೆಯೇ; (ವಿವರ ನೀಡುವುದು)	ಕೊಟ್ಟಿಗೆಯು ಗಣಿಗಾರಿಕೆ ಸ್ಥಳದಿಂದ ಬಹಳಷ್ಟು ದೂರವಿದ್ದು, ಇಲ್ಲಿಯವರೆವಿಗೂ ಯಾವುದೇ ತೊಂದರೆಗಳು ಕಂಡು ಬಂದಿರುವುದಿಲ್ಲ.
ಉ	ರಾಯಸಂದ್ರ ಅಮ್ರುತ್ ಮಹಲ್ ತಳಿ ಸಂವರ್ಧನ ಉಪ ಕೇಂದ್ರದ ಕೊಟ್ಟಿಗೆಯು ತಗ್ಗು ಪ್ರದೇಶದಲ್ಲಿದ್ದು ಕೊಟ್ಟಿಗೆಯ ಮೇಲ್ಚಾವಣಿಯು ಭಾಗಶಃ ಇರುವುದರಿಂದ ಹೆಚ್ಚು ಮಳೆಯಾದಾಗ ಮಣ್ಣು ಮಿಶ್ರಿತ ನೀರು ಕೊಟ್ಟಿಗೆಗೆ ನುಗ್ಗಿ ಜಾನುವಾರುಗಳಿಗೆ ಬಹಳ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಸಂಬಂಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಈ ವಿಷಯವು ಸರ್ಕಾರದ ಗಮನಕ್ಕೆ ಬಂದಿದ್ದು, ಈಗಾಗಲೇ ಹೊಸದಾಗಿ ಸುಸಜ್ಜಿತವಾದ ಜಾನುವಾರು ಕೊಟ್ಟಿಗೆಯನ್ನು ಎತ್ತರ ಪ್ರದೇಶದಲ್ಲಿ ನಿರ್ಮಿಸಲಾಗುತ್ತಿದೆ. ಸದ್ಯ ಇದ್ದಂತಹ ಕೊಟ್ಟಿಗೆಗೆ ನೀರು ನುಗ್ಗದಂತೆ ತಡೆಗೋಡೆ ನಿರ್ಮಿಸಿ ರಕ್ಷಣೆ ಒದಗಿಸಲಾಗಿದೆ.

ಪಸಂಮೀ ಇ-241 ಸಲೆವಿ 2020

ಪ್ರಭು ಬಿ. ಚವ್ಹಾಣ್
ಪಶುಸಂಗೋಪನೆ, ಹಜ್ ಮತ್ತು ವಕ್ಫ್ ಸಚಿವರು,

ಸಂಖ್ಯೆ: ಪಸಂಮೀ 4 ಅಮೂಅ 2004

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 15.04.2011.

"ತುರ್ತು"

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ:
ಪ್ರಧಾನ ವ್ಯವಸ್ಥಾಪಕರು,
ಮೈಸೂರು ಮಿನರಲ್ಸ್ ಲಿಮಿಟೆಡ್,
ನಂ:39, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು-560001.

1060
26 APR 2011

ವಿಷಯ: ಮೆ: ಮೈಸೂರು ಮಿನರಲ್ಸ್ ಲಿ.. ಸಂಸ್ಥೆಗೆ ಗುತ್ತಿಗೆ ನೀಡಿರುವ ಜಮೀನಿನ ಗುತ್ತಿಗೆ ದರ ಪರಿಷ್ಕರಣೆ ಬಗ್ಗೆ.

ದಿನಾಂಕ 08.11.2010ರಂದು ನಡೆದ ಸಭೆಯ
ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 08.11.2010ರಂದು ನಡೆದ ಸಭೆಯ ... ಪೂರ್ಣ ಪರಿಶೀಲನೆ ನಡೆಸಲಾಯಿತು. ಮೆ:
ನಿಲುವುಗಳನ್ನು ಅನುಸರಿಸಿ ವಿಷಯದ ಬಗ್ಗೆ ಪೂರ್ಣ ಪರಿಶೀಲನೆ ನಡೆಸಲಾಯಿತು. ಮೆ:
ಮೈಸೂರು ಮಿನರಲ್ಸ್ ಲಿಮಿಟೆಡ್ ಸಂಸ್ಥೆಗೆ ಈಗಾಗಲೇ ನೀಡಿರುವ ಜಮೀನಿನ ಗುತ್ತಿಗೆಯನ್ನು
ದಿನಾಂಕ 01.11.1996ರಿಂದ 5 ವರ್ಷಗಳ ಕಾಲ ನವೀಕರಿಸಿ 2001ರವರೆಗೂ ವಾರ್ಷಿಕ ಗುತ್ತಿಗೆ
ಮೊಬಲಗನ್ನು ₹5.00 ಲಕ್ಷಗಳಿಗೆ ನಿಗದಿಪಡಿಸಿರುವುದರಿಂದ, ಅದರಂತೆ ವಾರ್ಷಿಕ ಗುತ್ತಿಗೆ
ಮೊಬಲಗನ್ನು ಪಾವತಿಸಬೇಕೆಂದು ಹಾಗೂ 2001ರಿಂದ 2010ರವರೆಗೆ ಸಹ ಈಗಾಗಲೇ
ನಿಗದಿಪಡಿಸಲಾದ ₹5.00 ಲಕ್ಷಗಳಂತೆ ಪಾವತಿಸಬೇಕೆಂದು ಮತ್ತು ಮುಂದಿನ ಅವಧಿಗೆ ಸದರಿ
ಗುತ್ತಿಗೆ ಮೊಬಲಗಿನ ಮೇಲೆ ವಾರ್ಷಿಕ ಶೇಕಡ 5ರಂತೆ ಹೆಚ್ಚಿನ ಗುತ್ತಿಗೆ ಮೊಬಲಗು
ಪಾವತಿಸಬೇಕೆಂದು ಕೋರಲು ನಿರ್ದೇಶಿತನಾಗಿದ್ದೇನೆ. ಈ ಎಲ್ಲ ನಿಬಂಧನೆಗಳಿಗೊಳಪಟ್ಟು
ದಿನಾಂಕ 08.11.2010ರಂದು ನಡೆದ ಸಭೆಯ ನಡವಳಿಯನ್ವಯ ಉಳಿದ ಎಲ್ಲಾ ನಿಮ್ಮ
ಪ್ರಸ್ತಾವನೆಗಳನ್ನು ಅನುಮೋದಿಸಲಾಗಿದ್ದು, ಕೂಡಲೇ ಈ ಬಗ್ಗೆ ಆಯುಕ್ತರು, ಪಶುಪಾಲನಾ
ಮತ್ತು ಪಶುವೈದ್ಯ ಸೇವಾ ಇಲಾಖೆ ಇವರನ್ನು ಸಂಪರ್ಕಿಸಿ ಮುಂದಿನ ಅಗತ್ಯ ಕ್ರಮ
ಕೈಗೊಳ್ಳುವಂತೆ ಕೋರಲು ನಿರ್ದೇಶಿತನಾಗಿದ್ದೇನೆ.

(ಪ್ರಧಾನ ಕಾರ್ಯದರ್ಶಿಯವರಿಂದ
ಅನುಮೋದಿತ)

ತಮ್ಮ ನಂಬುಗೆಯ,

(ಬಿ.ಕೆ. ಶ್ರೀನಿವಾಸಮೂರ್ತಿ),
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
[ಪಶುಸಂಗೋಪನೆ]

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:— ಮೆ: ಮೈಸೂರು ಮಿನರಲ್ಸ್ ಲಿಮಿಟೆಡ್ ಬೆಂಗಳೂರು, ಇವರಿಗೆ ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕಿನ ಉಪ್ಪಿನ ಮರದ ಕಾವಲ್‌ನಲ್ಲಿ ಮತ್ತು ಚಿಕ್ಕನಹಳ್ಳಿಯಲ್ಲಿ 740 ಎಕರೆ ಜಮೀನನ್ನು ಕ್ರೋಮೈಟ್ ಗಣಿಗಾರಿ ಗುತ್ತಿಗೆ ಕೊಡುವ ಬಗ್ಗೆ.

ಸರ್ಕಾರದ ಆದೇಶ ಸಂಖ್ಯೆ: ವಾಕೈ: 18: ಮಿಗುನ: 87, ಬೆಂಗಳೂರು, ದಿನಾಂಕ: 28ನೇ ಸೆಪ್ಟೆಂಬರ್ 1988.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ವಾಕೈ: 34: ಮಿಗುನ: 85, ದಿನಾಂಕ: 18—9—85.

2) ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಡಿಎಂಜಿ: ಎಂಎಲ್: 78: ಸಿಆರ್—4: 86—87, ದಿನಾಂಕ: 1—1—88.

ಪ್ರಸ್ತಾವನೆ:

ಗಣಿ ಮತ್ತು ಭೂವಿಜ್ಞಾನ ಇಲಾಖೆ ನಿರ್ದೇಶಕರ ಶಿಫಾರಸಿನ ಮೇರೆಗೆ ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ಉಪ್ಪಿನ ಮರದ ಕಾವಲು ಭೂಮಿಯಲ್ಲಿ ತಗಡೂರು ಮತ್ತು ಚಿಕ್ಕನಹಳ್ಳಿಯಲ್ಲಿ 1406 ಎಕರೆ 34 ಗುಂಟೆ ಜಮೀನನ್ನು ಕ್ರೋಮೈಟ್ ಗಣಿಗಾರಿ ಮೆ: ಮೈಸೂರು ಮಿನರಲ್ಸ್ ಲಿಮಿಟೆಡ್, ಬೆಂಗಳೂರು ಇವರಿಗೆ ಮೇಲೆ ಓದಲಾದ (1)ರಲ್ಲಿ ಓದಲಾಗಿರುವ ಸರ್ಕಾರದ ಆದೇಶದಲ್ಲಿ 20 ವರ್ಷ ಕಾಲಾವಧಿಗೆ ಗುತ್ತಿಗೆ ಕೊಡಲಾಗಿತ್ತು. ಮೆ: ಮೈಸೂರು ಮಿನರಲ್ಸ್ ಲಿಮಿಟೆಡ್, ಬೆಂಗಳೂರು ಇವರು ಕ್ರೋಮೈಟ್ ನಿಕ್ಷೇಪ ಪ್ರದೇಶವನ್ನು ಮಾತ್ರ ಗುರುತಿಸಿ 1406 ಎಕರೆ, 34 ಗುಂಟೆ ಭೂಮಿಯಲ್ಲಿ ಕೇವಲ 740 ಎಕರೆ ಪ್ರದೇಶವನ್ನು ಮಾತ್ರ ಉಳಿಸಿಕೊಳ್ಳಲು ಕೇಳಿರುವುದರಿಂದ ಸರ್ಕಾರದ ಆದೇಶ ಸಂಖ್ಯೆ: ವಾಕೈ: 34: ಮಿಗುನ: 85 ದಿನಾಂಕ: 18—9—85ರಲ್ಲಿ ನೀಡಿರುವ ಷರತ್ತುಗಳೊಡನೆ 1406 ಎಕರೆ 34 ಗುಂಟೆಗೆ ಬದಲಾಗಿ 740 ಎಕರೆ ಪ್ರದೇಶವನ್ನು ಮಾತ್ರ ಮೆ: ಮೈಸೂರು ಮಿನರಲ್ಸ್ ಲಿಮಿಟೆಡ್ ಬೆಂಗಳೂರು ಇವರಿಗೆ ಗುತ್ತಿಗೆ ಕೊಡಬಹುದೆಂದು ಮೇಲೆ ಓದಲಾದ (2)ರಲ್ಲಿ ಓದಲಾಗಿರುವ ಪತ್ರದಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆ ನಿರ್ದೇಶಕರು ಶಿಫಾರಸು ಮಾಡಿರುತ್ತಾರೆ.

ಆದೇಶ

ಸರ್ಕಾರದ ಆದೇಶ ಸಂಖ್ಯೆ: ವಾಕೈ: 34: ಮಿಗುನ: 85, ದಿನಾಂಕ: 18—9—85ನ್ನು ರದ್ದುಪಡಿಸುತ್ತಾ, ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಶಿಫಾರಸಿನಂತೆ ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ಬಾಣಾವರ ಹೋಬಳಿ, ಉಪ್ಪಿನ ಮರದ ಕಾವಲು ತಗಡೂರು ಮತ್ತು ಚಿಕ್ಕನಹಳ್ಳಿಯಲ್ಲಿನ ಸರ್ವೆ ನಂ. 1ರಲ್ಲಿನ 740 ಎಕರೆ (ಏಳು ನೂರು ನಲವತ್ತು) ಜಮೀನನ್ನು ಮೈಸೂರು ಮಿನರಲ್ಸ್ ಲಿಮಿಟೆಡ್, ಬೆಂಗಳೂರು ಇವರಿಗೆ ಕ್ರೋಮೈಟ್ ಗಣಿಗಾರಿ ಗುತ್ತಿಗೆ ಕೊಡಲು ಸರ್ಕಾರದ ಮಂಜೂರಾತಿ ನೀಡಿದೆ.

(ಅ) ಗುತ್ತಿಗೆ ಅವಧಿ ಕಾಲಾವಧಿ 1—11—78 ರಿಂದ 31—10—98ರ ವರೆಗೆ 20 ವರ್ಷಗಳು (ಕಾಲವನ್ನು ನಿಗದಿ ಮಾಡಲಾಗಿದೆ).

(ಆ) ಮೆ: ಮೈಸೂರು ಮಿನರಲ್ಸ್ ಲಿಮಿಟೆಡ್ ರವರು ಮೇಲ್ಕಂಡ ಕಾವಲು ಪ್ರದೇಶವನ್ನು ಬಗರು ಹುಕುಂ ಸಾಗುವಳಿ ಮಾಡುತ್ತಿರುವವರಿಗೆ ಅವರಿಗೆ ತೊಂದರೆ ಕೊಡತಕ್ಕದ್ದಲ್ಲ.

(ಇ) ಮೆ: ಮೈಸೂರು ಮಿನರಲ್ಸ್ ಲಿಮಿಟೆಡ್ ...

(ಇ) 20 ವರ್ಷ ಅಂದರೆ 1-11-79 ರಿಂದ 31-10-1999 ರವರೆಗೆ ಗುತ್ತಿಗೆ ಅವಧಿ [illegible]

(ಉ) ವರ್ಷಕ್ಕೆ 25,000-00 ರೂಪಾಯಿಗಳಂತೆ ಪ್ರತಿ ವರ್ಷ ಗುತ್ತಿಗೆ ಹಣವನ್ನು ಪಶುಸಂಗೋಪನಾ ಇಲಾಖೆಗೆ ದಿನಾಂಕ: 1-11-79 ರಿಂದ ಮೈಸೂರು ಖನಿಜ ನಿಗಮ [illegible]

(ಊ) [illegible] (ಬಿಟ್ಟಾವರ) [illegible]

(ಋ) [illegible]

(ಎ) [illegible]

ಈ ಆದೇಶವನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಸಿಐ:150 [illegible]:81, ದಿನಾಂಕ: 24-9-1988 ಹಾಗೂ ಆರ್ಥಿಕ ಇಲಾಖೆ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ-133 ವೆಚ್ಚ-4: 88, ದಿನಾಂಕ: 11-2-88 ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ. ಶಿವಲಿಂಗಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ, ಮೀನುಗಾರಿಕೆ ಮತ್ತು
ಅರಣ್ಯ ಇಲಾಖೆ.

ಇವರಿಗೆ,

(1) ಮಹಾ ಲೇಖಪಾಲರು, ಲೆಕ್ಕಪತ್ರ (ಆಡಿಟ್ 1 ಮತ್ತು 2) ಕರ್ನಾಟಕ, ಬೆಂಗಳೂರು.
(2) ನಿರ್ದೇಶಕರು, ಗಣಿ ಮತ್ತು ಭೂಗರ್ಭ ಇಲಾಖೆ, ಬೆಂಗಳೂರು.
(3) ನಿರ್ದೇಶಕರು, ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
(4) ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಮೈಸೂರು ಖನಿಜ ನಿಗಮ, ಬೆಂಗಳೂರು.
(5) ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.
(6) ಆರ್ಥಿಕ ಇಲಾಖೆ (ವೆಚ್ಚ-4).
(7) ಕಾಪು ರಕ್ಷಾ ಕಡತ.